**ಸಾಕ್ಷಿಯನ್ನು ದಿನಾಂಕ *16.04.2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಚಿಕಿತ್ಸೆ ಮಾಡಿದ್ದೆ ಎಂದು ಹೇಳುವ ಗಾಯಗಳ ವಯಸ್ಸನ್ನು ನಿಪಿ–40 ರಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ–40 ರಲ್ಲಿ ಹೇಳಿರುವ ಎಲ್ಲಾ ಗಾಯಗಳು ಒಬ್ಬ ವ್ಯಕ್ತಿ ನುಜ್ಜಾದ ಕಲ್ಲುಗಳ ಮೇಲೆ ಮತ್ತು ಗಾಜಿನ ಪೀಸುಗಳ ಮೇಲೆ ಬಿದ್ದಲ್ಲಿ ಆಗುವ ಸಾಧ್ಯತೆ ಇರುತ್ತದೆ. ತನಿಖಾಧಿಕಾರಿಯವರು ನನಗೆ ಎಂ.ಒ–1 ಅನ್ನು ಕಳುಹಿಸಿ ನಿಪಿ–40 ರಲ್ಲಿ ಹೇಳಿರುವಂತಹ ಗಾಯಗಳು ಎಂ.ಒ–1 ರಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆಯಾ ಎಂದು ಕೇಳಿರುವುದಿಲ್ಲ. ಎಂ.ಒ 1 ರಿಂದ ಹಲ್ಲೆ ಮಾಡಿದರೆ ನಿಪಿ–40 ರಲ್ಲಿ ಹೇಳಿರುವ ಗಾಯಗಳು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಗಾಯಗಳು ಆಗಿ 6 ಗಂಟೆಗಿಂತ ಹೆಚ್ಚು ಅವಧಿಯ ಗಾಯಗಳು ಅಂತ ಹೇಳಿದ ಬಗ್ಗೆ ನಿಪಿ–40 ರಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಾನು ತನಿಖಾಧಿಕಾರಿಯವರ ಕೋರಿಕೆಯ ಮೇರೆಗೆ ನಿಪಿ–40 ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*